

ಮಣಿಸಿ ಅಂತಿಮವಾಗಿ ಮೂರನೇ ಸ್ಥಾನ ಗಳಿಸುವ ಮೂಲಕ ನಾಗ್ಪುರದ ಸಾಧ್ವಾನಿ (ಜನನ 22–12–2005) ಮೊದಲ ಬಾರಿಗೆ ದೇಶದ ಗಮನ ಸೆಳೆದಿದ್ದರು. ವಿಶ್ವದ ಅತ್ಯಂತ ಚುರುಕಿನ ಆಟಗಾರರಲ್ಲಿ ಒಬ್ಬ. ದೆಹಲಿಯ ಕಾಮನ್ವೆಲ್ತ್ ಟೂರ್ನಿಯಲ್ಲಿ 10 ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್.

2018ರಲ್ಲಿ ಪ್ರತಿಷ್ಠಿತ ಐಲ್ ಆಫ್ ಮ್ಯಾನ್‌ನಲ್ಲಿ ನಡೆದ ಟೂರ್ನಿಯಲ್ಲಿ ಅನುಭವಿ ವಿಶ್ವನಾಥನ್ ಆನಂದ್ ಎದುರಿನ ಮೊದಲ ಸುತ್ತಿನ ಪಂದ್ಯದಲ್ಲೇ ಈ ಪುಟ್ಟ ಬಾಲಕ ಸ್ಪಷ್ಟ ಮೇಲುಗೈ ಸಾಧಿಸಿ ಸಹ ಆಟಗಾರರಲ್ಲಿ ಬೆರಗು ಮೂಡಿಸಿದ್ದರು. ಅದನ್ನು ಗೆಲುವನ್ನಾಗಿ ಪರಿವರ್ತಿಸಲು ಸಾಧ್ಯವಾಗದಿದ್ದರೂ ಈತನ ಚುರುಕುತನ ಬೆಳಕಿಗೆ ಬಂದಿತ್ತು. ಮುಂದಿನ ವರ್ಷ ಇದೇ ಟೂರ್ನಿಯಲ್ಲಿ ಮೂರನೇ ಜಿಎಂ ನಾರ್ಮ್ ಪೂರೈಸಿ ಗ್ರ್ಯಾಂಡ್‌ಮಾಸ್ಟರ್ ಆದಾಗ ಸಾಧ್ವಾನಿ ವಯಸ್ಸು 13 ವರ್ಷ 9 ತಿಂಗಳು (ದೇಶದ 65ನೇ ಜಿಎಂ). ಚೆಸ್ ಇತಿಹಾಸದಲ್ಲಿ 9ನೇ ಅತಿ ಕಿರಿಯ ಜಿಎಂ. ಈ ವರ್ಷದ ಜನವರಿಯಲ್ಲಿ ರಷ್ಯಾದ ವ್ಲಾಡಿವೊಸ್ಟಾಕ್‌ನಲ್ಲಿ ನಡೆದ ಟೈಗರ್ ಕಪ್ ಬ್ಲಿಟ್ಜ್ ಚಾಂಪಿಯನ್‌ಷಿಪ್‌ನಲ್ಲಿ ವಿಜೇತನಾಗಿದ್ದ ಸಾಧ್ವಾನಿ ಅಲ್ಲಿ 12 ಸುತ್ತುಗಳನ್ನು ಆಡಿ 10ರಲ್ಲಿ ಜಯಗಳಿಸಿದ್ದರು. ಒಂದು ಸೋತು, ಒಂದು ಡ್ರಾ ಸಾಧನೆ ಕಡಿಮೆಯೇನಲ್ಲ.

## ಭರವಸೆಯ ನಿಹಾಲ್

ಕೇವಲ 14 ವರ್ಷ ವಯಸ್ಸಿನಲ್ಲೇ 2600 ರೇಟಿಂಗ್ ದಾಟಿದ ಸಾಧನೆ ನಿಹಾಲ್ ಸರೀನ್ (ಜನನ: ಜುಲೈ 13, 2004 ) ಎಂಬ ಕೇರಳದ ತ್ರಿಶೂರಿನ ಬಾಲಕನದ್ದು. ಆನ್‌ಲೈನ್ ಆಗಿ ನಡೆದಿದ್ದ ಈ ಹಿಂದಿನ ಚೆಸ್ ಒಲಿಂಪಿಯಾಡ್‌ನಲ್ಲಿ ಚಿನ್ನ ಗೆದ್ದ ಭಾರತ ತಂಡದಲ್ಲಿ ನಿಹಾಲ್ ಆಡಿದ್ದ.

2020ರಲ್ಲಿ ರ‍್ಯಾಪಿಡ್ ಮಾದರಿಯಲ್ಲಿ ನಡೆದಿದ್ದ 18 ವರ್ಷದೊಳಗಿನವರ ವಿಶ್ವ ಯೂತ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ



ಗೆದ್ದುಕೊಂಡಿದ್ದು ನಿಹಾಲ್ ಸರೀನ್ ಅವರ ಪ್ರಮುಖ ಸಾಧನೆಗಳಲ್ಲಿ ಒಂದು. 2019ರ ಸೀನಿಯರ್ ವಿಶ್ವಕಪ್‌ನಲ್ಲಿ ಆಡುವ ಮೂಲಕ ಈ ಸಾಧನೆಗೆ ಪಾತ್ರರಾದ ಅತಿ ಕಿರಿಯ ಆಟಗಾರ ಎನಿಸಿದ್ದರು. ಕಳೆದ ವರ್ಷದ ಜುಲೈನಲ್ಲಿ ಬೆಲ್‌ಗ್ರೇಡ್‌ನಲ್ಲಿ ನಡೆದ ಸಿಲ್ವರ್‌ಲೇಕ್, ಸರ್ಬಿಯಾ ಓಪನ್‌ನಲ್ಲೂ ಚಾಂಪಿಯನ್ ಆಗಿದ್ದರು.

## ಅರ್ಜುನ್ ನಾಗಾಲೋಟ

ಈ ಎಳೆಯರ ಪಡೆಯಲ್ಲಿ ವಯಸ್ಸಿನಲ್ಲಿ ಸ್ವಲ್ಪ ದೊಡ್ಡವರಾದ ಅರ್ಜುನ್ ಎರಿಗೈಸಿ (ಜನನ: ಸೆ. 2, 2003) ಹಾಲಿ ರಾಷ್ಟ್ರೀಯ ಸೀನಿಯರ್ ಚಾಂಪಿಯನ್. ಕಾನ್ಪುರದಲ್ಲಿ ಈ ವರ್ಷದ ಮಾರ್ಚ್‌ನಲ್ಲಿ ನಡೆದ 58ನೇ ಆವೃತ್ತಿಯಲ್ಲಿ ಅವರು ಟ್ರೋಫಿ ಎತ್ತಿಹಿಡಿದಿದ್ದರು. ಅದಕ್ಕಿಂತ ಎರಡು ತಿಂಗಳು ಮೊದಲು ನಡೆದ ಪ್ರತಿಷ್ಠಿತ ಟಾಟಾ ಸ್ಟೀಲ್ ಚಾಲೆಂಜರ್ಸ್ ಟೂರ್ನಿಯಲ್ಲೂ ಅವರು ಚಾಂಪಿಯನ್ ಕಿರೀಟ ಧರಿಸಿದ್ದರು. ರಾಷ್ಟ್ರೀಯ ಚಾಂಪಿಯನ್‌ಷಿಪ್ ಬೆನ್ನಿಗೇ ನಡೆದ ಡೆಲ್ಲಿ ಇಂಟರ್‌ನ್ಯಾಷನಲ್ ಓಪನ್ ಚೆಸ್ ಟೂರ್ನಿಯಲ್ಲೂ ಯಶಸ್ವಿನ ಓಟ. ಹೀಗಾಗಿ ಒಲಿಂಪಿಯಾಡ್ ತಂಡದಲ್ಲಿ ಸ್ಥಾನವನ್ನು ಬಹುತೇಕ ಆಗಲೇ ಖಚಿತಪಡಿಸಿಕೊಂಡಿದ್ದರು ಅರ್ಜುನ್.

ಅರ್ಜುನ್ 2018ರಲ್ಲಿ ಗ್ರ್ಯಾಂಡ್‌ಮಾಸ್ಟರ್ ಆಗಿದ್ದರು. ದೇಶದ 54ನೇ ಜಿಎಂ. ಆ ವರ್ಷ ಅವರಿಗೆ ಯಶಸ್ಸಿನ ವರ್ಷ. ಒಂದೇ ಸಾಲಿನಲ್ಲಿ ಆರು ನಾರ್ಮ್‌ಗಳ ಜೊತೆ 200 ರೇಟಿಂಗ್ ಅಂಕ ಸಂಪಾದಿಸಿದ್ದು ಮಹತ್ಸಾಧನೆಯೇ ಸರಿ. ಕಳೆದ ವರ್ಷದ ಕೊನೆಯಲ್ಲಿ (2021



ನವೆಂಬರ್) ನಡೆದಿದ್ದ ಟಾಟಾ ಸ್ಟೀಲ್ ಇಂಡಿಯಾ ರ‍್ಯಾಪಿಡ್ ಚೆಸ್ ಟೂರ್ನಿಯಲ್ಲೂ ಅರ್ಜುನ್ ಪೂರ್ಣ ಅಂಕ ಮುನ್ನಡೆಯೊಡನೆ ಚಾಂಪಿಯನ್ ಆಗಿದ್ದು ಎಲ್ಲರ ಹುಬ್ಬೇರುವಂತೆ ಮಾಡಿತ್ತು. ಅನುಭವಿ ಗ್ರ್ಯಾಂಡ್‌ಮಾಸ್ಟರ್‌ಗಳಾದ ಲೆವೊನ್ ಅರೋನಿಯನ್, ಪ್ರಗ್ನಾನಂದ, ವಿದಿತ್ ಸಂತೋಷ್ ಗುಜರಾತಿ ಅವರನ್ನು ಹಿಂದೆ ಹಾಕಿದ್ದು ಗಮನಾರ್ಹ. ಚೆನ್ನೈನ ಒಲಿಂಪಿಯಾಡ್‌ನಲ್ಲಿ ಅರ್ಜುನ್ ಸಾಧನೆಯನ್ನು ಕುತೂಹಲದಿಂದ ಎದುರುನೋಡಲಾಗುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in

## ಭಾರತದ ಒಲಿಂಪಿಯಾಡ್ ತಂಡಗಳು

**ಓಪನ್ ವಿಭಾಗ**

**ಭಾರತ ‘ಎ’ ತಂಡ:** ವಿದಿತ್ ಗುಜರಾತಿ, ಪಿ.ಹರಿಕೃಷ್ಣ, ಅರ್ಜುನ್ ಎರಿಗೈಸಿ, ಎಸ್.ಎಲ್. ನಾರಾಯಣನ್ ಮತ್ತು ಕೃಷ್ಣನ್ ಶಶಿಕಿರಣ್.

**ಭಾರತ ‘ಬಿ’ ತಂಡ:** ನಿಹಾಲ್ ಸರೀನ್, ಗುಕೇಶ್ ಡಿ, ಅಧಿಬನ್, ಆರ್. ಪ್ರಗ್ನಾನಂದ ಮತ್ತು ರೌನಕ್ ಸಾಧ್ವಾನಿ.

**ಭಾರತ ‘ಸಿ’ ತಂಡ:** ಸೂರ್ಯಶೇಖರ ಗಂಗೂಲಿ, ಕಾರ್ತಿಕೇಯನ್ ಮುರಳಿ, ಎಸ್. ಪಿ. ಸೇತುರಾಮನ್, ಅಭಿಜಿತ್ ಗುಪ್ತಾ ಮತ್ತು ಅಭಿಮನ್ಯು ಪುರಾಣಿಕ್.

‘ಎ’ ತಂಡಕ್ಕೆ ಜಿಎಂ ಶ್ರೀನಾಥ್ ನಾರಾಯಣನ್, ‘ಬಿ’ ತಂಡಕ್ಕೆ ಜಿಎಂ ಆರ್. ಬಿ.ರಮೇಶ್, ‘ಸಿ’ ತಂಡಕ್ಕೆ ಜಿಎಂ ತೇಜಸ್ ಭಾಕ್ರೆ ನಾಯಕರಾಗಿದ್ದಾರೆ.

**ಮಹಿಳೆಯರ ವಿಭಾಗ:**

**ಒಂದನೇ ತಂಡ:** ಕೊನೇರು ಹಂಪಿ, ಹರಿಕ ದ್ರೋನವಳಿ, ಆರ್.ವೈಶಾಲಿ, ಭಕ್ತಿ ಕುಲಕರ್ಣಿ ಮತ್ತು ತಾನಿಯಾ ಸಚ್‌ದೇವ್.

**ಎರಡನೇ ತಂಡ:** ವಂತಿಕಾ ಅಗರವಾಲ್, ಸೌಮ್ಯಾ ಸ್ವಾಮಿನಾಥನ್, ಮೇರಿ ಆ್ಯನ್ ಗೋಮ್ಸ್, ಪದ್ಮಿನಿ ರಾವುತ್ ಮತ್ತು ದಿವ್ಯಾ ದೇಶಮುಖ್. ಒಂದನೇ ತಂಡಕ್ಕೆ ಜಿಎಂ ಅಭಿಜಿತ್ ಕುಂಟೆ ಮತ್ತು ಎರಡನೇ ತಂಡಕ್ಕೆ ಜಿಎಂ ಸ್ವಪ್ನಿಲ್ ಧೋಪಡೆ ಕ್ಯಾಪ್ಟನ್ ಆಗಿದ್ದಾರೆ.